ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 74-77
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಹೊನ್ನಾಳಿ ಸೀಮೆಯ ಕಥನ ಸಾಹಿತ್ಯದ ಭಾಷಿಕ ನಿರೂಪಣೆ

ರಾಧ ಎಚ್.ಎಂ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

Abstract:

ಕರ್ನಾಟಕದ ಜನ ಸಮುದಾಯದ ಸಂಸ್ಕೃತಿಗಳು ತನ್ನದೇ ಆದ ನಾಡು–ನುಡಿಯ ಸಂಪತ್ತನ್ನು ಒಳಗೊಂಡಿದೆ. ಜ್ಞಾನ ಪರಂಪರೆಗಳು ಈ ನೆಲದ ಪ್ರಜ್ಞೆಯನ್ನು ಪದರು ಪದರಾಗಿ ಬಿಡಿಸುವ ಕೆಲಸವನ್ನು ಸಾವಿರಾರು ವರ್ಷಗಳ ಹಿಂದಿನಿಂದಲೂ ಮಾಡುತ್ತಲೆ ಬಂದಿವೆ. ಕನ್ನಡಿಗರು ನೆಲೆಸಿರುವ ಈ ನೆಲಕ್ಕೆ ಮತ್ತು ಕನ್ನಡಿಗರಿಗೆ ಇಲ್ಲಿನ ಭಾಷೆಯ ಹಿರಿಮೆ ಇದೆ. ಕೆರೆ, ಬಾವಿ, ನದಿ, ದೇಗುಲ, ಮಸೀದಿ, ಹಸ್ತಪ್ರತಿ, ಶಾಸನ, ಮಠಗಳು ಆಯಾ ಪ್ರದೇಶದ ಭೌಗೋಳಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ವಿಷಯಗಳನ್ನು ಹೇಳುತ್ತವೆ. ಇಲ್ಲಿಂದಲೇ ಇತಿಹಾಸ ತಿಳಿಯಲು ದಾರಿ ಸ್ಪಷ್ಟವಾಗುತ್ತದೆ. ಕೆಲವರು ಇರುವುದನ್ನು ತಿರುವುಮುರುವಾಗಿ ಬರೆದಿರುವುದುಂಟು ಆದರೆ ಮುಂದೊಮ್ಮೆ ಕಾಲದ ಸತ್ಯಗಳು ಒಂದಲ್ಲ ಒಂದು ಬಾರಿ ಸರಿದಾರಿಗೆ ಹೆಜ್ಜೆಯಾಗುವ ಕೆಲಸ ಮಾಡುತ್ತಾ ಬರುತ್ತಲಿವೆ. ಪ್ರಸ್ತುತ ಲೇಖನದಲ್ಲಿ ಹೊನ್ನಾಳಿ ಸೀಮೆಯ ಕಥನ ಸಾಹಿತ್ಯದ ಭಾಷಿಕ ನಿರೂಪಣೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

Keywords: *ಕಥನ ಸಾಹಿತ್ಯ, ಕೆಂಚ ಶಿವುಗರು, ಮರ್ಯಾದಸ್ಥರು, ಚೌಡಿಹುಟ್ಟು, ಗಿಡ್ಡಜ್ಜಿಯ ಬಯಲು, ಭಾಷಿಕ ನಿರೂಪಣೆ.*

ಪೀಠಿಕೆ

ಕಾನೂನು, ನ್ಯಾಯಾಲಯ, ಪೊಲೀಸ್ ಸ್ಟೇಷನ್ ಇತ್ತೀಚಿನ ನ್ಯಾಯ ತೀರ್ಮಾನಕ್ಕೂ ಮುಂಚೆ ಹೊನ್ನಾಳಿ ಸೀಮೆಯ ಸುತ್ತಮುತ್ತಲಿನ ಅಂದರೆ ಇಂದಿನ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದವರೆಗೂ ಹೊನ್ನಾಳಿಯ ಹಿರೇಕಲ್ ಮಠದ ನ್ಯಾಯ ಪಂಚಾಯಿತಿ ನಡೆಯುತ್ತಿತ್ತು ಎಂಬ ದಾಖಲೆಗಳು ಸಿಗುತ್ತವೆ. ಮಾತು, ಭಾಷೆ ಎಂಬುದು ಜನರ ಬದುಕಿನ ಸಂಕಷ್ಟಗಳನ್ನು ಹೀಗೆ ಆಯಾ ಮಠಮಾನ್ಯಗಳ ಮೂಲಕ ವ್ಯಕ್ತಿಯ ಆತ್ಮಸಾಕ್ಷಿಗೆ ಅನುಗುಣವಾಗಿ ನ್ಯಾಯ ಪಂಚಾಯ್ತಿ ನಡೆಸುತ್ತಿರುವ ರೂಢಿ ಈ ಹೊತ್ತಿಗೂ ಚಾಲ್ತಿಯಲ್ಲಿರುವುದು ಮಠದ ವಿಶೇಷತೆ.

ಎಚ್.ದೇವಿರಪ್ಪ ಬರೆದ 'ಕೆಂಚ ಶಿವುಗರು' ಕಥೆಯಲ್ಲಿ ಜಾತಿಯಲ್ಲಿ ಅಸ್ಪೃಶ್ಯನಾದ ಕೆಂಚನಿಗೆ ಮೇಲ್ವರ್ಗದ ಶಿವುಗ (ದಕ್ಷ ಪಾತ್ರದಾರಿ) ರಂಗದ ಮೇಲೆ ನಿಜವಾಗಲೂ ಬೇಕಂತಲೇ ಕತ್ತಿಯಿಂದ ತಿವಿಯುತ್ತಾನೆ. ಸಾಯುವ ಕೊನೆಯಲ್ಲಿ ಕೆಂಚ "ಪಾಪ ಶಿವಣ್ಣ ತಾನೇ ಏನು ಮಾಡುತ್ತಾನೆ ಆವೇಶ ಬಂದುಬಿಡ್ತು" ಎನ್ನುತ್ತಾನೆ. ಬೆಳೆಯುವ ಮಕ್ಕಳಲ್ಲಿ ಜಾತಿ ತಾರತಮ್ಯ ತುಂಬುವ ಹಿರಿಯರು ಇಂತದ್ದೊಂದು ಅನಾಹುತಕ್ಕೆ ಕಾರಣವಾಗುತ್ತಾರೆ.

Please cite this article as: ರಾಧ ಎಚ್.ಎಂ. (2024). ಹೊನ್ನಾಳಿ ಸೀಮೆಯ ಕಥನ ಸಾಹಿತ್ಯದ ಭಾಷಿಕ ನಿರೂಪಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 74–77

ತನ್ನ ಸಾವನ್ನು ಆಕಸ್ಮಿಕವೆಂದು ತಿಳಿಯುವ ಕೆಂಚನ ಮಾತು ಆತನ ಮುಗ್ಧತೆ ಮಾತ್ರವಲ್ಲ ವ್ಯವಸ್ಥೆಯು ಹುನ್ನಾರವನ್ನು ಹೇಳುತ್ತದೆ. ಈ ಕತೆಯ ಕೊನೆಯಲ್ಲಿ ಶಿವುಗ ಪಶ್ಚಾತ್ತಾಪದಿಂದ ಆತನೇ ಊರಿಂದ ಕಣ್ಮರೆಯಾಗುವಂತೆ ಮಾಡಲಾಗಿದೆ. ಒಂದು ಎಳೆ ಹುಡುಗನ ಸಾವಿನ ನಂತರ ಇಂತದ್ದೊಂದು ಬದಲಾವಣೆಗೆ ದಾರಿಯಾಗುವ ಮೂಲಕ ಕತೆಗಾರರು ಪ್ರಗತಿಪರವಾಗಿ ಆಲೋಚನೆ ಮಾಡಿದ್ದಾರೆ ಎನ್ನಬಹುದು. ಇತ್ತೀಚೆಗೆ ಜನವರಿ 8, 2023 ರಂದು ಜನ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುವಾಗ ಬಾನು ಮುಷ್ತಾಕ್ ಅವರು ಹೇಳುತ್ತಾರೆ. ಸಾಯುವವನಿಗೆ ನಾನ್ಯಾಕೆ ಸಾಯ್ತಾ ಇದ್ದೀನಿ ಅಂತ ಗೊತ್ತಿಲ್ಲ, ಸಾಯಿಸುವವನಿಗೆ ನಾನ್ಯಾಕೆ ಸಾಯಿಸ್ತಾ ಇದೀನಿ ಅಂತ ಗೊತ್ತಿಲ್ಲ ಅನ್ನೋ ಸಂದರ್ಭದಲ್ಲಿ ನಾವಿದ್ದೇವೆ. ಈ ಕಾಲದ ಕಡು ವಾಸ್ತವವನ್ನು ಕುರಿತು ಹೇಳುವ ಈ ಆತಂಕ ಕೆಂಚ ಶಿವುಗರು ಕಥೆಯಲ್ಲಿಯೂ ನಡೆದು ಬಿಡುತ್ತದೆ ಎಂಬುದು ಸತ್ಯ. ಕಾಲಾಂತರದಲ್ಲಿ ಇಂತಹ ಸಾವುಗಳನ್ನು ದಿನೇ ದಿನೇ ಹೆಚ್ಚು ಮಾಡುತ್ತಾ ಲಾಭಕ್ಕಾಗಿ ಬಳಸಿಕೊಳ್ಳುವ ರಾಜಕಾರಣದ ಹುನ್ನಾರವನ್ನು ಅರಿಯುವಂತೆ ಮಾಡುತ್ತದೆ. ಇದಕ್ಕೆ ಬಲಿಯಾಗುತ್ತಿರುವುದು ದೇಶದ ಯುವಕರ ಭವಿಷ್ಯವೇ ಆಗಿದೆ ಎಂಬುದು ನಮ್ಮ ದೌರ್ಭಾಗ್ಯ.

ಡಾ. ಕೊಟ್ರೇಶ್ ಉತ್ತಂಗಿ ಬರೆದ 'ಚೌಡಿಹುಟ್ಟು' ಕಥೆಯಲ್ಲಿ ಒಂದು ದೇವಸ್ಥಾನ ರೂಪುಗೊಂಡ ಬಗ್ಗೆ ನಿರೂಪಕರೆ ಸಾಕ್ಷಿಯಾಗಿದ್ದರ ಕುರಿತು ಹೇಳುತ್ತದೆ. ಜೊತೆಗೆ ಇಲ್ಲಿ ಮೌಢ್ಯವನ್ನು ಒಡೆಯುವ ಕೆಲಸ ಕೂಡ ಮಾಡಲಾಗಿದೆ. "ಕರ್ಪೂರದ ದೀಪ ಅಂದ್ಮೂಡ್ಲೆ ಜನರು ಮಕ್ಕಳಿಗೆ ಕೊಡಿಸ್ಲಿಕ್ಕೆ ಬಿಸ್ಕೆಟ್ ಗೆ ರೊಕ್ಕ ಇಲ್ಲದಿದ್ದರೂ ದೀಪದ ತಟ್ಟೆಗೆ ಹಾಕ್ಲಿಕ್ಕೆ ರೊಕ್ಕ ಇರ್ತಿತ್ತು" ಈ ಮಾತು, ಬದುಕನ್ನ ಹಸನು ಮಾಡುತ್ತಾ ಹಸಿವು, ಬಡತನವನ್ನು ದೂರ ಮಾಡುವ ಬದಲು ದೈವದ ಆಚರಣೆ ಮುಗ್ಧ ಜನರ ಬದುಕನ್ನ ಇನ್ನಷ್ಟು ಬಡವಾಗಿಸುತ್ತಿವೆ ಎಂಬುದನ್ನು ತಿಳಿಸುತ್ತದೆ. ಅಲ್ಲಿನ ಪೂಜಾರಿಯ ಬದುಕು ಸಂಪನ್ನವಾಗುವಾಗ ಅಲ್ಲಿನ ಭಕ್ತರ ಹದಗೆಟ್ಟ ಆರ್ಥಿಕ ಪರಿಸ್ಥಿತಿ ಇಲ್ಲಿ ತೆರೆದು ಕೊಳ್ಳುತ್ತದೆ. ಶ್ರಮ ಸಮುದಾಯದ ದೈವಗಳನ್ನೇ ಬಳಸಿಕೊಂಡು ತಮ್ಮ ಜಾತಿ, ವರ್ಗದ ಪ್ರಾಬಲ್ಯವನ್ನು ಬಲಪಡಿಸಿಕೊಳ್ಳುವ ಮೇಲ್ವರ್ಗದ ಜನರ ಮೂಲವನ್ನೇ ಅಲ್ಲಾಡಿಸಿ ದೈವದ ಹುಸಿ ನಂಬಿಕೆಯನ್ನು ಕಥೆಗಾರರು ಬಯಲುಗೊಳಿಸುತ್ತಾರೆ. ಧಾರ್ಮಿಕ ಆಚರಣೆಗಳು ಮನುಷ್ಯನನ್ನು ಬೇರ್ಪಡಿಸದೆ ಮುಕ್ತವಾಗಿ ಬೆರೆತು ಸಮತೆಯನ್ನು ಕಾಯ್ದುಕೊಳ್ಳುವ ಕೆಲಸ ಮಾಡಬೇಕು ಎಂಬುದು ಕಥೆಯ ಒಟ್ಟು ನಿಲುವಾಗಿದೆ. ಇಲ್ಲಿ ಬದುಕಿಗೆ ಮನುಷ್ಯ ಪ್ರೀತಿಯೇ ದೇವರು ಮಿಕ್ಕಿದ್ದೆಲ್ಲ ಮುಖ್ಯವಲ್ಲ. ಎಂತದ್ದೇ ದೈವದ ಆಚರಣೆಗಳು ಮನುಕುಲಕ್ಕೆ ಮಾರಕವಾಗಿದ್ದರೆ ಮಾತ್ರ ಅವು ಪ್ರಶ್ನಾರ್ಹವೇ ಆಗಿರುತ್ತವೆ ಎಂಬ ತಿಳಿವು ಕಥೆಯ ಓದಿನ ಮೂಲಕ ಅರ್ಥವಾಗುತ್ತದೆ.

ಕೆ.ಪಿ. ದೇವೇಂದ್ರಪ್ಪನವರ 'ಮರ್ಯಾದಸ್ಥರು' ಕಥೆಯ ಶೀರ್ಷಿಕೆ ಮರ್ಯಾದಸ್ಥರು ಅಂದರೆ ಯಾರು? ಅವರ ಅನೈತಿಕ ಕೆಲಸಗಳಿಗೆ ಸಮಾಜ ಸಭ್ಯ ಎಂಬ ಕಿರೀಟ ಕೊಟ್ಟದ್ದು ಹೇಗೆ? ಅನ್ಯಾಯಕ್ಕೊಳಗಾದ ಹೆಣ್ಣು ಮರ್ಯಾದೆ ಇಲ್ಲದ ಊರ ಗೌಡನ ದೌರ್ಜನ್ಯವನ್ನು ಸಹಿಸಿಕೊಳ್ಳುವುದು ಯಾಕೆ? ಹಾಲಮ್ಮ ಮತ್ತು ಆನಂದನ ಪರಿಶುದ್ಧ ಸ್ನೇಹ ಸಲುಗೆಗೆ ಮರ್ಯಾದೆ ಇಲ್ಲವೇ? ಊರಿನ ಸುಳ್ಳು ಸುದ್ದಿಗೆ ಅಂಜಿ ಅನಂತ ತಾನೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದು ಸರಿಯೇ? ಕೊಳಕು ಮನಸ್ಥಿತಿಯ ಆಚಾರ್ಯ ಮತ್ತು ರುದ್ರೇಗೌಡನ ಮರ್ಯಾದೆಗೆ ಸಲ್ಲಬೇಕಾದ ಬೆಲೆ ಏನು? ಹೀಗೆ ಹತ್ತಲವು ಪ್ರಶ್ನೆಗಳು ಈ ಕಥೆಯ ನಿರೂಪಣೆಯಿಂದಲೇ ಹೊರಬರುತ್ತದೆ. ಉದಾಹರಣೆ... ರುದ್ರೇಗೌಡ : 'ಏನೇ ಚಿನಾಲಿ, ಅಲೆ ಏನು ಹುಂದ್ರಾ ಕಟ್ತಾ ಇದ್ದೀಯ ಅವ್ನ ಜೊತೆಗೆ ಎನ್ನುತ್ತಾ ಹಾಲವ್ವನಿಗೆ ಸಿಕ್ಕ ಸಿಕ್ಕ ಕಡೆ ವದ್ದರು.' ಮೂರು ಮಕ್ಕಳು ಎಚ್ಚರಾಗಿ ಗೊಳೋ ಎಂದು

ಅತ್ತರು ಕನಿಕರವಿಲ್ಲದ ಈ ದಾಷ್ಟ್ಯತೆ, ಜಾತಿ, ಹಣ, ಅಧಿಕಾರ, ಅಂತಸ್ತು ಮಾತ್ರವಲ್ಲ ಗಂಡಿನ ದರ್ಪವು ಸೇರಿದಂತೆ ಇಲ್ಲಿನ ಭಾಷಿಕ ನಿರೂಪಣೆಯಲ್ಲಿ ಕಂಡುಬರುತ್ತದೆ. ಮದುವೆ ಮತ್ತು ಪ್ರೀತಿ ಇವೆರಡನ್ನು ಹೊರತುಪಡಿಸಿ ಹೆಣ್ಣು ಇಂತದ್ದೊಂದು ಹಸಿವಿನ ಅನಿವಾರ್ಯತೆಗೆ ತನ್ನನ್ನೇ ತೆತ್ತುಕೊಳ್ಳುತ್ತ ಎರಡನೇ ದರ್ಜೆಯವಳಾಗಿ ಉಳಿದುಬಿಡುವ ಹಾಲಮ್ಮನ ಜೀವನ ಓದುಗರಲ್ಲಿ ಕರುಣೆಯನ್ನು ಹುಟ್ಟಿಸುತ್ತದೆ. ಅವಳ ಬದುಕಿನ ಮರ್ಯಾದೆಗೆ ಇರುವ ಪ್ರಾಮಾಣಿಕ ಬೆಲೆ ಏನು ಎಂಬುದಾಗಿ ವ್ಯಂಗ್ಯ ಪ್ರಶ್ನೆಯನ್ನು ಎಸೆದು ಬಿಡುತ್ತದೆ. ಇದಕ್ಕೆ ಹಾಲಮ್ಮನ ಕಣ್ಣೀರು ಮಾತ್ರ ಪ್ರತಿಕ್ರಿಯೆ ಆಗುವುದು ಅವಳ ಅಸಹಾಯಕತೆಯನ್ನು ಹೇಳುತ್ತದೆ.

ಕೃಷ್ಣ ಮಾಸಡಿ ಅವರ 'ಗ್ಯಾನಿ ಮತ್ತು ಗುಲಾಬಿ' ಕತೆಯಲ್ಲಿ ಗ್ಯಾನಿ ತನ್ನ ಹೆಂಡತಿಗೆ ಬಳಸುವ ಭಾಷೆ ಕೂಡ ಒರಟುತನದ್ದೆ ಆಗಿದೆ. ಹೆಂಡತಿಯ ದೇಹ ಮತ್ತು ಮನಸ್ಸು ಗಂಡನ ಹಕ್ಕು ಮಾತ್ರ ಎಂಬುದಾಗಿ ಚಿತ್ರತವಾಗಿದೆ. "ಮುಟ್ಟಿಲ್ಲವಂತೆ ಮುಚ್ಚು ಬಾಯಿ ಮಾದರ ಚೋದ್" ಎಂದು ಬಯ್ಯುವ ಅಧಿಕೃತ ಹಕ್ಕು ಗ್ಯಾನಿಗೆ ಮಾತ್ರ ಸ್ವಂತದ್ದು. ಇನ್‌ಸ್ಪೇಕ್ಟರ್ ಮಾದೇವಣ್ಣನ ಪ್ರೀತಿಗೆ ಒಲಿದು ಗುಲಾಬಿ ಮದುವೆಗೂ ಮುನ್ನ ಮೂರು ತಿಂಗಳ ಮಗುವನ್ನು ಹೊತ್ತು ಗ್ಯಾನಿಯನ್ನ ಮದುವೆಯಾಗಿ, ಮೆರವಣಿಗೆಯಲ್ಲಿ ಅಚಾನಕ್ಕಾಗಿ ಮಗುವನ್ನು ಕಳೆದುಕೊಳ್ಳುತ್ತಾಳೆ. ಆನಂತರ ಮತ್ತೆ ಮಾದೇವಣ್ಣನನ್ನು ಸೇರುತ್ತಾಳೆ. ಕೊನೆಗೆ ಊರಿಂದಲೇ ಕಣ್ಮರೆಯಾಗುವ ಗ್ಯಾನಿ ಮಾಡಿದ ತಪ್ಪಾದರೂ ಎನು ಎಂಬ ಪ್ರಶ್ನೆ ಓದುಗರನ್ನು ಕಾಡುತ್ತದೆ. ಗಂಡುಗಳಿಬ್ಬರ ಸಹವಾಸದಲ್ಲಿ ವ್ಯವಸ್ಥೆಯೊಂದರ ಚೌಕಟ್ಟಿನಲ್ಲಿ ಗುಲಾಬಿಯ ಸುತ್ತಲಿನ ಕಥೆಯ ವಾಸ್ತವದ ಅರಿವನ್ನು ಓದುಗರಿಗೆ ಪರಿಚಯಿಸುತ್ತಾರೆ ಕಥೆಗಾರರು.

ಡಿ.ಬಿ.ಶಂಕರಪ್ಪನವರು ಬರೆದ 'ಗಿಡ್ಡಜ್ಜಿಯ ಬಯಲು' ಕಾದಂಬರಿಯಲ್ಲಿಯೂ ಉಡಳ್ಳಿಗೆ ಗುದ್ದಮ್ಮನ ಬ್ಯಾನೆ ಹೆಮ್ಮಾರಿ ರೋಗಕ್ಕೆ ಕೆಳಗೇರಿಯ ಅನಕ್ಷರಸ್ಥ ಮಂಜಿ ಭೇದಭಾವ ಮಾಡದೆ ಔಷಧಿ ನೀಡಿ ಜನರ ಜೀವ ಕಾಪಾಡುತ್ತಾಳೆ. ಸ್ವಾತಂತ್ರ್ಯ ಪೂರ್ವದ ಗೌಡಿಕೆಯನ್ನು ಮೇಲ್ವರ್ಗದ ದೇವಿರಕ್ಕ ಕೂಡ ಪ್ರಶ್ನಿಸಿ ಎದುರಾಡುತ್ತಾಳೆ. ನೋಡು ಮಾವ ಹಟ್ಟಿಜನ ಏನು ಮಾತಾಡಲ್ಲ, ಇವರು ಭಿಕ್ಷೆ ಬೇಡಿ ನಿಮ್ಮಿಂದ ಪಡೆಯೋದೇನಿಲ್ಲ ನೀವೇ ತೀರ್ಮಾನಿಸಿ ಎಂದು ದಿಟ್ಟವಾಗಿ ಮಾತನಾಡಿದಾಗ ಜನರೇ ತಬ್ಬಿಬ್ಬುಗೊಳ್ಳುತ್ತಾರೆ. ತನ್ನ ಗಂಡ ಬಸಲಿಂಗಪ್ಪಗೌಡನಿಗೆ ಅಂಗಿ ಮ್ಯಾಲಂಗಿ ಚೆಂದನೋ ನನ್ನರಾಯ ಎಂದು ಗಂಡನನ್ನು ತಿದ್ದುವ ಕೆಲಸ ಮಾಡುತ್ತಾಳೆ. ಆರಂಭದಲ್ಲಿ ಅಳುಕು ಮನಸ್ಥಿತಿಯಿಂದ ನಂತರ ಗಟ್ಟಿಗಿತ್ತಿಯಾಗಿ ನಿಲ್ಲುವ ದೇವಿರಕ್ಕನ ಪಾತ್ರ ಪ್ರಗತಿಪರವಾಗಿ ಮುನ್ನಡೆಯುತ್ತದೆ. ಜೀನಹಳ್ಳಿ ಸಿದ್ದಲಿಂಗಪ್ಪನವರ 'ಪ್ರಿಯೇ ರಾಣಿ' ಕಥೆಯೊಳಗೆ ಪ್ರೀತಿ, ಪ್ರೇಮ ಅನ್ನೋದರ ಅರ್ಥ ಮನಸುಗಳನ್ನ ಬೆಸೆದುಕೊಳ್ಳುವ ಪ್ರಕ್ರಿಯೆ ಎಂಬ ನಿಲುವನ್ನು ದಾಟಿಸುತ್ತದೆ. ಪ್ರೀತಿ ಅನ್ನೋದರ ಅರ್ಥ ಎರಡು ಜೀವಿ ಕೂಡಿ ಚೆನ್ನಾಗಿ ಬದುಕೋದಲ್ವೇ? ಈ ಮಾತು ವ್ಯಕ್ತಿಯ ಭಾವಲೋಕ ಪ್ರೀತಿಯ ಭಾಷಾಲೋಕವೇ ಆಗುವುದನ್ನು ಕಾಣಬಹುದಾಗಿದೆ. ಬಾಳಿನ ಏಕತಾನತೆಗೆ ಅದರ ಲಯಕ್ಕೆ ಹೆಣ್ಣು ಗಂಡು ಇಬ್ಬರು ಜೊತೆಯಾಗಿಯೇ ಸ್ವರವಾಗಿ ಮಿಡಿಯುವ ಕ್ರಮದಲ್ಲಿ ಬದುಕಿನ ಅರ್ಥ ನೆಲೆಯೂರುತ್ತದೆ ಎಂಬ ಕಥಾ ನಿರೂಪಣ ಕ್ರಮ ಬಹಳ ಮುಖ್ಯವಾಗುತ್ತದೆ. ಊರಿನ ರೋಗ ವಾಸಿ ಮಾಡುವುದು ಮಾತ್ರವಲ್ಲ ಅಲ್ಲಿನ ಜನರ ಕೊಳಕು ಮನಸ್ಥಿತಿಯನ್ನು ವಾಸಿಮಾಡುವ ಮಂಜಿ ಏಕಕಾಲಕ್ಕೆ ಎರಡು ಕಾಯಿಲೆಗಳಿಗೆ ಚಿಕಿತ್ಸೆ ಕೊಡುವ ಪ್ರಯತ್ನ ಮಾಡುತ್ತಾಳೆ.

ಭಾರತದ ಜಾತಿ ರಾಜಕಾರಣ ಎಂಬುದು ಉಡಹಳ್ಳಿಯಲ್ಲಿ ದಟ್ಟವಾಗಿದ್ದರೂ ಸಹ ಅಲ್ಲೊಂದು ಹೆಣ್ಣು ಜೀವ ತಾಯ್ತನದ ಆರೈಕೆಯಲ್ಲಿ ಮುಳುಗಿ ಸುತ್ತಲಿನ ಸಮಾಜದ ಮಲಿನತೆಯನ್ನು ತೊಳೆಯುವ ಕೆಲಸ ಮಾಡುತ್ತದೆ. ಕಾಲರದಂತ ಕಾಯಿಲೆಗಳು ಧಿಡೀರ್ ಅಪ್ಪಳಿಸಿದಾಗ, ಗ್ರಾಮದ ಸ್ಥಳೀಯ ದೈವದ

ನಂಬಿಕೆಯಲ್ಲಿ ಔಷಧಿ ಮಾಡಿಕೊಳ್ಳುತ್ತಾ ಬದುಕನ್ನು ಉಳಿಸಿಕೊಳ್ಳುವ ಕ್ರಮ ಹಳ್ಳಿಯ ಅಥವಾ ಕೇರಿಗಳ ಸಹಜ ಬದುಕಿನ ನೋಟವನ್ನು ಹೇಳುತ್ತದೆ. ಈ ಸೀಮೆಯ ಹಬ್ಬ, ಆಚರಣೆ, ಕುಲದೈವ, ನಂಬಿಕೆ, ನ್ಯಾಯ ಪಂಚಾಯ್ತಿ, ಲೋಕರೂಢಿ ಪದ್ಧತಿಗಳು ಸ್ಥಳೀಯ ಸಾಮಾಜಿಕ ತಿಳಿವನ್ನು ಕಥನದೊಳಗೆ ಹೇಳುತ್ತವೆ. ಹಾಗೆಯೇ ಕತೆ, ಕಾದಂಬರಿಗಳಲ್ಲಿ ಬರುವ ಪಾತ್ರಗಳ ಮೂಲಕ ಮನುಷ್ಯನ ಮನಸ್ಸಿನ ತಾಕಲಾಟಗಳನ್ನು ಸೂಕ್ಷ್ಮ ನೋಟದಲ್ಲಿ ಕಾಣಿಸುತ್ತವೆ. ಇಲ್ಲಿನ ಭಾಷೆಯ ಸೊಗಡಿನ ಕಾರಣಕ್ಕೆ ಮತ್ತೆಮತ್ತೆ ಮರು ಓದನ್ನು ಬಯಸುವ ಹೊನ್ನಾಳಿ ಸೀಮೆಯ ಕಥನ ಸಾಹಿತ್ಯದ ನಿರೂಪಣಾ ಕ್ರಮವೂ ಬಹಳ ಮಹತ್ವದ್ದಾಗಿದೆ.

ಆಕರ ಗ್ರಂಥಗಳು

- ಚನ್ನೇಶ್ ಹೊನ್ನಾಳಿ (ಸಂ.). (2015). *ಹೊನ್ನಾಳಿ ಹೊಡ್ತ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ಕೊಟ್ರೇಶ್ ಉತ್ತಂಗಿ, ನಾ. (2021). *ವಕ್ರಸುಳಿ.* ಸಿವಿಜಿ ಬುಕ್ಸ್.
- ಕೃಷ್ಣ ಮಾಸಡಿ. (2022). *ಸಮಗ್ರ ಕಥೆಗಳು.* ಶಶಿ ಪಬ್ಲಿಕೇಷನ್.
- ಶಂಕರಪ್ಪ, ಡಿ.ಬಿ. (2013). *ಗಿಡ್ಡಜ್ಜಿಯ ಬಯಲು.* ಮಾಯಮ್ಮ ಪ್ರಕಾಶನ.
- ಶೇಖರ್ ಕತ್ತಿಗೆ (ಸಂ.) (1986). *ಹಸಿದ ಕಣ್ಣುಗಳು.* ನಾಲ್ಮುಖಿ ಪ್ರಕಾಶನ.